CC-O. In Public Domain. Digitized by eGangotri

ಆಕಾಶಯಾನ

ಭಾಗ ೧

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕಾಶಯಾನ

೧೯೬೭ರ ಮೇ–ಜೂನ್ ತಿಂಗಳಲ್ಲಿ ಮೈಸೂರು ನಗರದಲ್ಲಿ ನಡೆದ
ವಯಸ್ಕರ ಶಿಕ್ಷಣ ಸಾಹಿತ್ಯ ರಚನಾಲಯದಲ್ಲಿ ರಚಿತವಾದುದು

ಭಾವನಾ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಅನಕ್ಷರಸ್ಥ ವಯಸ್ಕರು ಓದು, ಬರಹ ಕಲಿತ ಮಾತ್ರಕ್ಕೆ ವಯಸ್ಕರ ಶಿಕ್ಷಣದ ಪ್ರಗತಿಯು ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ. ಉಳಿಸಿಕೊಳ್ಳಲು ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣ ರಂಗದ ಬಗ್ಗೆ ಆಸಕ್ತಿ ಇರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸಬೇಕಾದ, ಆ ದಿಕ್ಕಿನಲ್ಲಿ ಕೆಲಸಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲು, ಓದಿನ ಮೂಲಕ ಅರಿವು ಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹೊರತಂದಿರುವ ವಯಸ್ಕರಿಗೆ ಉಪಯುಕ್ತವಾದ ಅವರ ಆಸಕ್ತಿ ಅಭಿರುಚಿಗೆ ಅನುಗುಣವಾಗಿ, ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರ ಬಂದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳೆಂದೇ ಜನಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ನಾಡಿನಾದ್ಯಂತ ಮೆಚ್ಚುಗೆ ಪಡೆದಿರುವ ಈ ಮಾಲಿಕೆಯ ಪುಸ್ತಕಗಳಲ್ಲಿ ಒಂದು ನೂರು ಕೃತಿಗಳ ಪುನರ್ ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಬಲ್ಲದು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು

ದೇವನೂರು ಶಿವಮಲ್ಲು
ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

15-11-88

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು ಮಾತು

ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಓದಲು ಸರಳವಾದ ಮತ್ತು ಸ್ವಾರಸ್ಯವಾದ ಸಾಹಿತ್ಯವನ್ನು ಒದಗಿಸುವುದು ವಯಸ್ಕರಿಗೆ ಓದುಬರಹ ಕಲಿಸುವುದಕ್ಕಿಂತ ಮುಖ್ಯವಾದುದು. ಇಲ್ಲದಿದ್ದರೆ ವಯಸ್ಕರು ಮತ್ತೆ ಅನಕ್ಷರಸ್ಥರಾಗಿ ಬಿಡುತ್ತಾರೆ. ಹಾಗೆ ಆಗದಂತೆ ಮಾಡಲು ವಯಸ್ಕರ ಶಿಕ್ಷಣ ಸಮಿತಿ ವಯಸ್ಕರಿಗೆ ಸೂಕ್ತವಾದ ಸಾಹಿತ್ಯವನ್ನು ರಚಿಸುವ ವ್ಯವಸ್ಥೆಯನ್ನು ಮಾಡುತ್ತಿದೆ.

ವಯಸ್ಕರ ಮನೋಭಾವ, ಆಸಕ್ತಿ ಮತ್ತು ಅಭಿರುಚಿ, ವಾಚ್ಯಶಕ್ತಿ, ಶಬ್ದ ಸಂಪತ್ತು—ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯವನ್ನು ರಚಿಸುವುದು ಸುಲಭವಲ್ಲ. ಈ ಕಲೆ ಒಂದು ಶಾಸ್ತ್ರವಾಗಿಯೇ ಬೆಳೆದಿದೆ, ಬೆಳೆಯುತ್ತಿದೆ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಇದರ ಬಗ್ಗೆ ವಿಶೇಷವಾಗಿ ಸಂಶೋಧನೆ, ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಶಾಸ್ತ್ರೀಯವಾಗಿ ಸಾಹಿತ್ಯವನ್ನು ರಚಿಸಬೇಕು.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ರಾಜ್ಯ ಸರಕಾರದ ಶಿಕ್ಷಣ ಇಲಾಖೆಯ ನೆರವಿನೊಡನೆ ಈ ಕಾರ್ಯದಲ್ಲಿ ತೊಡಗಿದೆ. ಲೇಖಕರಿಗೆ ಈ ಬಗ್ಗೆ ಮುಖ್ಯವಾದ ಅಂಶಗಳನ್ನು ತಿಳಿಸುವ ಉದ್ದೇಶದಿಂದ ಸಾಹಿತ್ಯ ರಚನಾಲಯಗಳನ್ನು ಏರ್ಪಡಿಸುತ್ತಿದೆ.

ಮೈಸೂರು ನಗರದಲ್ಲಿ 1967ರ ಮೇ 10 ರಿಂದ ಜೂನ್ 8 ರವರೆಗೆ ಅಂಥ ಒಂದು ಸಾಹಿತ್ಯ ರಚನಾಲಯ ಏರ್ಪಾಡಾಗಿತ್ತು. ಇಪ್ಪತ್ತೊಂದು ಮಂದಿ ಲೇಖಕರು ಈ ರಚನಾಲಯದಲ್ಲಿ ಭಾಗವಹಿಸಿದ್ದರು.

ಅವರು ಹೊಸದಾಗಿ ಓದು ಬರಹ ಕಲಿತ ವಯಸ್ಕರಿಗೆ ಶಾಸ್ತ್ರೀಯವಾಗಿ ಹಂತ ಹಂತವಾಗಿ ಕಾರ್ಡು, ಮಡಿಕೆ ಮತ್ತು ಪುಸ್ತಿಕೆಗಳ ರೂಪದಲ್ಲಿ ಸಾಹಿತ್ಯವನ್ನು ರಚಿಸಿದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಆ ಸಾಹಿತ್ಯ ರಚನಾಲಯದಲ್ಲಿ ತಯಾರಾದ ಪುಸ್ತಿಕೆಗಳಲ್ಲಿ ಇದು ಒಂದು. ಇದನ್ನು ತಮ್ಮ ಕೈಯಲ್ಲಿಡಲು ಸಂತೋಷಿಸುತ್ತೇನೆ.

ಎಂ. ಮಲ್ಲಿಕಾರ್ಜುನಸ್ವಾಮಿ
ಅಧ್ಯಕ್ಷ
ವಯಸ್ಕರ ಶಿಕ್ಷಣ ಸಮಿತಿ

ಮೈಸೂರು
10-11-1967

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕಾಶಯಾನ

ಒಂದು ದಿನ ಸಂಜೆ. ತಿಮ್ಮನಹಳ್ಳಿಯ ಜನ ಹೊಲ, ಗದ್ದೆ, ಕುಂಬಾರಿಕ, ಬಡಗಿತನ ಮುಂತಾದ ತಮ್ಮ ತಮ್ಮ ಸಾಮಾನುಗಳನ್ನು ಮನೆಗಳಲ್ಲಿ ಇಟ್ಟು ಪ್ರತಿದಿನದಂತೆ ಇಂದೂ ಚಾವಡಿಗೆ ಬಂದರು. ದಿನವೂ ಒಂದೆರಡು ಗಂಟೆ ಚಾವಡಿಯಲ್ಲಿ ಪಂಚಾಯಿತಿಯ ರೇಡಿಯೋ ಕೇಳುವುದು ಅವರ ವಾಡಿಕೆ.

ಇಂದೂ ಬೊಮ್ಮಯ್ಯ, ಸಂಜೀವಪ್ಪ, ವೆಂಕಟ, ನಾಗರೆಡ್ಡಿ ಮುಂತಾದ ಹತ್ತು ಹನ್ನೆರಡು ಜನ ಸೇರಿದ್ದರು. ರೇಡಿಯೋದಲ್ಲಿ ಹಳ್ಳಿಯ ಪದಗಳು ಬಂದುವು. ಹಿಂದೆಯೇ ಲಾವಣಿ ಬಂದಿತು. ಅನಂತರ ಸುದ್ದಿ ಬಂದಿತು. ಸುದ್ದಿಯಲ್ಲಿ ಚಂದ್ರನಲ್ಲಿಗೆ ರಾಕೆಟ್ ಬಿಟ್ಟರು ಎಂದು ಕೇಳಿಸಿತು.

ಕೂಡಲೆ ಬೊಮ್ಮಯ್ಯ ಮತ್ತು ಸಂಜೀವಪ್ಪ ಅದೇನು ಅದೇನು ಎಂದು ಗುಸುಗುಟ್ಟಿಕೊಂಡರು. ಅವರಿಗೆ ತಿಳಿಯಲಿಲ್ಲ. ಅವರು ಪಕ್ಕದವರನ್ನು ಕೇಳಿದರು. ಅವರಿಗೂ ತಿಳಿಯಲಿಲ್ಲ. ಎಲ್ಲರೂ ಗುಸುಗುಸು ಮಾತಾಡಿಕೊಂಡರು. ಈ ವೇಳೆಗೆ ಸುದ್ದಿ ಮುಗಿಯಿತು.

ರೇಡಿಯೋ ಬಳಿ ಆನಂದ ಕುಳಿತಿದ್ದ. ಅವನು ಶಾನುಭೋಗ ನಾರಣಪ್ಪನವರ ಮಗ. ಆತ ಕಾಲೇಜಿನಲ್ಲಿ

Sri Vidyabharathi Book Centre, Sringeri

 CC-0. In Public Domain. Digitized by eGangotri



ಆಕಾಶ ಬಾಣ

ಓದಿದವನು. ರಜಾ ಎಂದು ತಿಮ್ಮನಹಳ್ಳಿಗೆ ಬಂದಿದ್ದನು.

"ಚಂದ್ರನಲ್ಲಿಗೆ ರಾಕೆಟ್ಟು ಬಿಡುವುದು ಎಂದರೆ ಏನು ಸ್ವಾಮಿ?" ಎಂದು ಎಲ್ಲರೂ ಆತನನ್ನು ಕೇಳುವವರೇ.

"ನಮಗೆ ಈ ವಿಷಯ ಏನೂ ತಿಳಿಯದು. ಪೂರಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯ ತಿಳಿಸಿ ಸ್ವಾಮಿ" ಎಂದು ಬೊಮ್ಮಯ್ಯ ಕೇಳಿದನು.

ಉಳಿದ ಎಲ್ಲರಿಗೂ ತಮ್ಮ ಪ್ರಶ್ನೆಯೂ ಅದೇ ಎನಿ



ಓ, ಆಕಾಶ ಬಾಣ!

Sri Vidyabharathi Book Centre, Sringeri

CC-0. In Public Domain. Digitized by eGangotri

ಸಿತು. ಗುಸುಗುಸು ಸದ್ದು ನಿಲ್ಲಿಸಿ ಎಲ್ಲರೂ ಉತ್ತರಕ್ಕಾಗಿ ಕಾತರರಾದರು.

ಆನಂದ ಹೇಳತೊಡಗಿದ—

"ನಮ್ಮ ತಿಮ್ಮನಹಳ್ಳಿಯಲ್ಲಿ ರಾಮನವಮಿ ದಿನ ರಾಮದೇವರ ತೇರು ನಡೆಸುತ್ತೇವೆ. ಸಂತೋಷಕ್ಕಾಗಿ ತೇರು ಹಾದುಹೋಗುವ ದಾರಿಯಲ್ಲಿ ಉದ್ದಕ್ಕೂ ಬಾಣ ಬಿರುಸು ಹಚ್ಚುತ್ತೇವೆ. ಆಕಾಶಬಾಣ ಹಾರಿಸುತ್ತೇವೆ. ಈ ಆಕಾಶಬಾಣವನ್ನು ಹೇಗೆ ಮಾಡುತ್ತಾರೆ ? ಅದು ಹೇಗೆ ಮೇಲಕ್ಕೆ ಏರುತ್ತದೆ ? ಯೋಚಿಸಿ" ಎಂದು ಕೇಳಿದ.

ಕೂಡಲೆ ನಾಗರೆಡ್ಡಿ ಹೆಮ್ಮೆಯಿಂದ ಹೇಳಿದ—

"ವರ್ಷ ವರ್ಷವೂ ಆಕಾಶ ಬಾಣವನ್ನು ತಯಾರಿಸುವವನು ನಾನೇ. ತಗಡಿನ ಚಿಕ್ಕ ಡಬ್ಬಿಯಲ್ಲಿ ಮದ್ದಿನ ಪುಡಿ ತುಂಬುತ್ತೇನೆ. ಅದನ್ನು ಹಗುರಾದ ಬಿದಿರಿನ ಕಡ್ಡಿಯ ತುದಿಗೆ ಕಟ್ಟುತ್ತೇನೆ. ಡಬ್ಬಿಯ ಕೆಳಗೆ ಕಿಡಿ ಮುಟ್ಟಿಸಲು ಬತ್ತಿ ಸಿಕ್ಕಿಸುತ್ತೇನೆ. ಬತ್ತಿಗೆ ಕಿಡಿ ಇಟ್ಟಾಗ ಬೆಂಕಿಯು ಡಬ್ಬಿಯೊಳಗಿನ ಪುಡಿಗೆ ಮುಟ್ಟುತ್ತದೆ. ಆಗ ಪುಡಿಯು ಹೊತ್ತಿಕೊಳ್ಳುತ್ತದೆ, ರಂಧ್ರದ ಮೂಲಕ ಹೊಗೆ ಮತ್ತು ಬೆಂಕಿ ಹೊರಚೆಲ್ಲುತ್ತದೆ. ಆಕಾಶಬಾಣವನ್ನು ಮೇಲುಮಾಡಿ ಸ್ವಲ್ಪ ಮೇಲಕ್ಕೆ ಎಸೆಯಬೇಕು. ಅದು ರಿವ್ವನೆ ಎತ್ತರಕ್ಕೆ ಹಾರುತ್ತಾ ಹೋಗುತ್ತದೆ. ಮದ್ದು ಪೂರಾ ಉರಿದುಹೋದ ಮೇಲೆ ಕಡ್ಡಿಯ ಡಬ್ಬಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೊಂದಿಗೆ ಕೆಳಗೆ ಬೀಳುತ್ತದೆ" ಎಂದು ವಿವರಿಸಿದ.

ಎಲ್ಲರೂ ಕಿವಿಗೊಟ್ಟು ಕೇಳುತ್ತಾ ಇದ್ದರು. ಇದೆಲ್ಲವೂ ಅವರಿಗೆ ಸ್ವಾರಸ್ಯ ಎನಿಸಿತು.

ಆನಂದ ಮುಂದೆ ಹೇಳತೊಡಗಿದ—

"ನಾಗರೆಡ್ಡಿ ಇದುವರೆಗೆ ಹೇಳಿದ ಆಕಾಶಬಾಣದಂತೆಯೇ ರಾಕೆಟ್ ಸಹ ಹಾರುತ್ತದೆ. ಆಕಾಶಬಾಣ ಏಕೆ ಹಾರುತ್ತದೆ ಗೊತ್ತೆ ? ಡಬ್ಬಿಯ ಕೆಳಗೆ ಒಂದೇ ರಂಧ್ರ ಇರುತ್ತದೆ, ಮದ್ದಿಗೆ ಬೆಂಕಿ ತಾಗಿ ಅದು ಹೊತ್ತಿಕೊಳ್ಳುತ್ತದೆ. ಆಗ ವಿಶೇಷವಾದ ಹೊಗೆ ಉಂಟಾಗುತ್ತದೆ. ಅದು ರಭಸವಾಗಿ ರಂಧ್ರದಿಂದ ಹೊರಕ್ಕೆ ನುಗ್ಗುತ್ತದೆ. ಹೊಗೆ ಎಷ್ಟು ರಭಸವಾಗಿ ನುಗ್ಗುತ್ತದೋ ಅಷ್ಟೇ ರಭಸದಿಂದ ಡಬ್ಬಿಯು ರಂಧ್ರದ ಎದುರು ದಿಕ್ಕಿಗೆ ನುಗ್ಗುತ್ತದೆ. ನಾವು ರಂಧ್ರವನ್ನು ಕೆಳಗೆ ಮಾಡಿರುತ್ತೇವೆ. ಅಂದರೆ ಡಬ್ಬಿಯು ಮೇಲೆ ಏರುತ್ತದೆ."

ಸಂಜೀವಪ್ಪ ನಡುವೆಯೇ ತಡೆದು, "ಇನ್ನೂ ಸ್ವಲ್ಪ ಚೆನ್ನಾಗಿ ತಿಳಿಸಿ ಆನಂದಪ್ಪಾ" ಎಂದನು.

ಚಾವಡಿಯ ಒಂದು ಮೂಲೆಯಲ್ಲಿ ರಾಮಕ್ಕ ಕುಳಿತಿದ್ದಳು. ಆಕೆಗೂ ಇವರ ಮಾತಿನಲ್ಲಿ ಆಸಕ್ತಿ. ಇವರ ಮಾತುಗಳನ್ನು ಕೇಳುತ್ತಿದ್ದಳು. ಆಕೆಯ ತೊಡೆಯ ಮೇಲೆ ಮೂರು ವರ್ಷದ ಕೂಸು ಮಲಗಿ ನಿದ್ರಿಸುತ್ತಿತ್ತು. ಅದರ ಕೈಲಿ ಗಾಳಿ ತುಂಬಿದ ಆಟದ ಬೆಲೂನು ಇತ್ತು.

CC-0. In Public Domain. Digitized by eGangotri

"ಆ ಬೆಲೂನು ಈ ಕಡೆ ಕೊಡಿ. ಆಕಾಶಬಾಣ ಹೇಗೆ ಹಾರುತ್ತದೆ, ತೋರಿಸುತ್ತೇನೆ" ಎಂದ ಆನಂದ.

ಎಲ್ಲರಿಗೂ ಮೋಜು ಎನಿಸಿತು. ರಾಮಕ್ಕ ಮಗುವಿನ ಕೈಯಿಂದ ಬೆಲೂನು ಬಿಡಿಸಿಕೊಟ್ಟಳು. ಆನಂದ ಬೆಲೂನಿನ ಬಾಯಿಗೆ ಕಟ್ಟಿದ್ದ ದಾರವನ್ನು ಬಿಚ್ಚಿದ. ಹಿಂದೆಯೇ ಗಾಳಿ ಹೋಗದಂತೆ ಭದ್ರವಾಗಿ ಹಿಡಿದು ಕೊಂಡ.

"ಈಗ ಬೆಲೂನಿನ ಬಾಯನ್ನು ಕೆಳಗೆ ಮಾಡುತ್ತೇನೆ. ಒಮ್ಮೆಗೇ ಬೆರಳುಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಏನಾಗುತ್ತದೆ ನೋಡಿ" ಎಂದು ಹಾಗೆಯೇ ಮಾಡಿದ. ಒಮ್ಮೆಗೇ ಬೆಲೂನು ಸರ್ರನೆ ಮೇಲಕ್ಕೆ ಹಾರಿತು.

"ಬೆಲೂನಿನ ಗಾಳಿ ರಭಸವಾಗಿ ಕೆಳಮುಖ ನುಗ್ಗಿತು, ಅದರಿಂದ ಬೆಲೂನು ಮೇಲೆ ಏರಿತು. ಆಕಾಶ ಬಾಣ ಕೂಡ ಹೀಗೆಯೇ ಹಾರುವುದು" ಎಂದಾಗ ತಾವು ಹೊಸ ವಿಷಯ ತಿಳಿದೆವು ಎಂದು ಎಲ್ಲರಿಗೂ ಸಂತೋಷ ವಾಯಿತು,

"ಆನಂದಪ್ಪ ನೀವು ವಿಚಾರ ಹೇಳಿ, ಮಾಡಿ ತೋರಿಸಿದ್ದು ಬಹಳ ಚೆನ್ನಾಗಿತ್ತು. ಹಾಗಾದರೆ ಈ ರಾಕೆಟ್ಟು ಅನ್ನುವುದು ಏನು ? ಹೇಗಿರುತ್ತದೆ ?" ಎಂದು ಕೇಳಿದ ವೆಂಕಟ.

Sri Vidyabharathi Book Centre, Sringeri

CC-O. In Public Domain. Digitized by eGangotri



ರಾಕೆಟ್ ಹಾರುತ್ತಿರುವುದು

"ರಾಕೆಟ್ ಕೂಡ ಆಕಾಶಬಾಣದಂತೆಯೇ ಹಾರುತ್ತದೆ. ಆದರೆ ಅದನ್ನು ಬಿದಿರು ಮತ್ತು ಡಬ್ಬಿಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿರುವುದಿಲ್ಲ. ಅದನ್ನು ವಿಶೇಷವಾದ ಲೋಹಗಳಿಂದ ಮಾಡಿರುತ್ತಾರೆ. ಗಾತ್ರದಲ್ಲಿ ಬಹಳ ದೊಡ್ಡದಾಗಿರುತ್ತದೆ. ಎತ್ತರವೋ ಕೆಲವು ತೆಂಗಿನ ಮರಗಳ ಎತ್ತರವೂ ಇರುತ್ತವೆ. ಇಂತಹವನ್ನು ತಯಾರಿಸಲು ಬಹಳ ಕಷ್ಟ. ವಿಪರೀತ ಹಣ ಖರ್ಚಾಗುತ್ತದೆ. ಇದು ನೂರಾರು ಮೈಲಿಗಳ ಎತ್ತರ ಆಕಾಶದಲ್ಲಿ ಏರಬೇಕಾಗುತ್ತದೆ. ಸುತ್ತಬೇಕಾಗುತ್ತದೆ. ಇದಕ್ಕೆ ಆಕಾಶಬಾಣದಲ್ಲಿ ತುಂಬಿದಂತಹ ಮದ್ದು ಸರಿಹೋಗುವುದಿಲ್ಲ. ರಾಕೆಟ್ಟನ್ನು ಬಹಳ ವೇಗದಿಂದ ಮೇಲಕ್ಕೆ ಕೊಂಡು ಒಯ್ಯಬೇಕಾಗುತ್ತದೆ. ಆದುದರಿಂದ ರಾಕೆಟ್ಟಿಗೆ ವಿಶೇಷತರವಾದ ಮದ್ದನ್ನು ಉಪಯೋಗಿಸುತ್ತಾರೆ. ಈ ಮದ್ದಿಗೆ ರಾಕೆಟ್ಟಿನ ಇಂಧನ ಎನ್ನುತ್ತಾರೆ. ಇಂಧನ ತುಂಬಿದ ನಾಲ್ಕು ಐದು ಕೋಣೆಗಳನ್ನು ಒಂದರ ಮೇಲೆ ಒಂದನ್ನು ಜೋಡಿಸಿರುತ್ತಾರೆ. ಮೊದಲು ರಾಕೆಟ್ಟನ್ನು ನೆಲದ ಮೇಲೆ ಭದ್ರವಾಗಿ ನಿಲ್ಲಿಸಿರುತ್ತಾರೆ. ಕೆಳಗಿನಿಂದ ಮೊದಲ ಕೋಣೆ ಕೆಲಸ ಮಾಡುತ್ತದೆ. ಇದರಿಂದ ರಾಕೆಟ್ಟು ನೆಲ ಬಿಟ್ಟು ಏಳುತ್ತದೆ. ಕೆಲವು ಮೈಲಿ ಎತ್ತರ ಹೋದ ಮೇಲೆ ಮೊದಲ ಕೋಣೆ ಕಳಚಿ ಬೀಳುತ್ತದೆ. ಈ ವೇಳೆಗೆ ಇನ್ನೊಂದು ಕೋಣೆ ಕೆಲಸ ಮಾಡುತ್ತದೆ. ಹೀಗೆಯೇ ಒಂದೊಂದು ಕೋಣೆಯೂ ಹೆಚ್ಚು ಹೆಚ್ಚು ರಭಸವಾಗಿ ರಾಕೆಟ್ಟನ್ನು ಮೇಲೆಮೇಲಕ್ಕೆ ನೂರಾರು ಮೈಲಿಗಳ ವರೆಗೆ ತೆಗೆದುಕೊಂಡು ಹೋಗು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತದೆ, ಕೊನೆಯ ಕೋಣೆ ಭೂಮಿಯನ್ನು ಸುತ್ತತೊಡಗುತ್ತದೆ.” ಎಂದ ಆನಂದ.

“ಸರಿ ಆನಂದಪ್ಪ. ಕೊನೆಗೆ ಒಂದೇ ಕೋಣೆ ಇರುತ್ತದೆ ಎಂದಿರಿ, ಅದು ಹೇಗೆ ಸುತ್ತುತ್ತದೆ? ಸುತ್ತಲು ಅದರಲ್ಲಿ ಯಂತ್ರ ಇರುತ್ತದೆಯೇ?” ಎಂದು ಕೇಳಿದ ಸಂಜೀವಪ್ಪ.

“ಅದು ಹೀಗೆ ನೋಡಿ. ಒಂದು ವಿಚಿತ್ರ ನೀವು ತಿಳಿಯಬೇಕು. ವಿಮಾನ ಮೇಲೆ ಏರಿ ಅದು ಸುತ್ತಲು ಯಂತ್ರ ಬೇಕು. ಆದರೆ ರಾಕೆಟ್ ಸುತ್ತಲು ಯಂತ್ರ ಬೇಕಿಲ್ಲ. ಆಶ್ಚರ್ಯ ಅಲ್ಲವೆ? ಭೂಮಿಗೆ ಎಲ್ಲ ವಸ್ತುಗಳನ್ನೂ ತನ್ನ ಕಡೆಗೇ ಸೆಳೆದುಕೊಳ್ಳುವ ಶಕ್ತಿ ಇದೆ. ಹಾಗೆ ಅದು ವಿಮಾನವನ್ನು ಸೆಳೆಯುತ್ತದೆ. ಆದರೆ ಈ ಸೆಳೆತದಿಂದ ತಪ್ಪಿಸಿಕೊಳ್ಳಲು ವಿಮಾನದ ಯಂತ್ರ ನಡೆಯುತ್ತಿರುತ್ತದೆ. ಇದರಿಂದ ವಿಮಾನ ಮುಂದೆ ಹಾರುತ್ತಾ ಇರುತ್ತದೆ. ನಿಮಗೆ ನೆನಪಿರಬೇಕು. ರಾಕೆಟ್ಟನ್ನು ನೂರಾರು ಮೈಲಿ ಮೇಲಕ್ಕೆ ಹಾರಿಸುತ್ತಾರೆ. ಅದು ಅಷ್ಟು ಎತ್ತರಕ್ಕೆ ಹೋಗಿರುವುದರಿಂದ ಭೂಮಿ ಅದನ್ನು ಸೆಳೆಯುವುದಿಲ್ಲ. ಇದರ ಬದಲು ರಾಕೆಟ್ಟು ಭೂಮಿಯ ಸುತ್ತ ಸುತ್ತತೊಡಗುತ್ತದೆ. ಅಲ್ಲದೆ ರಾಕೆಟ್ಟಿನಲ್ಲಿ ಯಂತ್ರಗಳೂ ಇರುತ್ತವೆ. ಅವು ಇರುವುದು ರಾಕೆಟ್ಟು ಸುತ್ತಲು ಅಲ್ಲ. ಆದರೆ ಅವು ನಮಗೆ ಅಲ್ಲಿಂದಲೇ ಅನೇಕ ವಿಷಯಗಳನ್ನು ತಿಳಿಸಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುವುದು" ಎಂದು ಹೇಳಿದ ಆನಂದ.

"ರಾಕೆಟ್ಟು ಮೇಲೆ ಸುತ್ತುತ್ತಾ ಇದ್ದು ಬಿಡುತ್ತದೆಯೇ ?" ಎಂದು ಕೇಳಿದ ಬೊಮ್ಮಯ್ಯ.

"ಅದನ್ನು ಹಾರಿಸುವ ಮುಂಚೆ ಅದು ಇಷ್ಟೇ ಸುತ್ತು ಹಾಕಬೇಕು ಎಂದು ಲೆಕ್ಕಾಚಾರ ಮಾಡಿರುತ್ತಾರೆ. ಅಷ್ಟು ಸುತ್ತು ಆದಮೇಲೆ ಭೂಮಿಯಿಂದ ಕೆಲವು ಯಂತ್ರಗಳಿಂದ ಸೂಚನೆ ಕಳಿಸುತ್ತಾರೆ. ರಾಕೆಟ್ಟಿನಲ್ಲಿರುವ ಯಂತ್ರ ಈ ಸೂಚನೆಯನ್ನು ತಿಳಿದು ಹಿಂತಿರುಗುತ್ತದೆ. ಅಲ್ಲದೆ ಅದು ಇಂತಹ ಕಡೆಯೇ ಇಳಿಯಬೇಕೆಂದೂ ಲೆಕ್ಕಾಚಾರ ಮಾಡಿರುತ್ತಾರೆ ಅದು ಹಾಗೆಯೇ ಇಳಿಯುತ್ತದೆ. ಇಳಿದ ರಾಕೆಟ್ಟಿನ ಯಂತ್ರಗಳನ್ನು ಪರೀಕ್ಷಿಸಿ ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯುತ್ತಾರೆ."

"ಹಾಗೆ ಅದು ಇಳಿಯಲು ಮತ್ತೆ ಅದರಲ್ಲಿ ನಾಲ್ಕು ಕೋಣೆಗಳು ಇರುತ್ತವೆಯೇನು ?" ಎಂದು ಕೇಳಿದ ವೆಂಕಟ.

"ಇಲ್ಲ. ಆದರೆ ಅದರಲ್ಲಿ ಕೆಲವು ಯಂತ್ರಗಳು ಇರುತ್ತವೆ. ಅವು ಅದನ್ನು ಕೆಳಕ್ಕೆ ಇಳಿಯುವಂತೆ ಮಾಡುತ್ತವೆ" ಎಂದ ಆನಂದ.

"ರಾಕೆಟ್ಟು ಬಿಡುವುದರಿಂದ ನಮಗೆ ಯಾವ ಯಾವ ವಿಷಯಗಳು ತಿಳಿಯುತ್ತವೆ ?" ಎಂದ ತಮ್ಮಣ್ಣ.

"ತುಂಬಾ ಮೇಲೆ ಎಷ್ಟು ಬಿಸಿ ಇದೆ, ಭೂಮಿ,

Sri Vidyabharathi Book Centre, Sringeri

CC-O. In Public Domain. Digitized by eGangotri



ರಾಕೆಟ್‌ನ ಕೊನೆಯ ಕೋಣೆ ಭೂಮಿಯನ್ನು ಸುತ್ತುತ್ತಿದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಸೂರ್ಯ, ಚಂದ್ರ ನಕ್ಷತ್ರಗಳು ಅಲ್ಲಿಂದ ಹೇಗೆ ಕಾಣಿಸುತ್ತವೆ ? ಮುಂತಾದುವನ್ನು ಯಂತ್ರಗಳು ತಿಳಿಸುತ್ತವೆ. ಇದನ್ನು ತಿಳಿಯುವುದರಿಂದ ಮಳೆ ಯಾವಾಗ ಬರುತ್ತದೆ? ಬಿರುಗಾಳಿ ಬೀಸುತ್ತದೆಯೆ ? ಮುಂತಾದ ವಿಷಯಗಳನ್ನು ಮೊದಲೇ ತಿಳಿದುಕೊಳ್ಳಬಹುದು. ಇದರಿಂದ ಬೇಸಾಯಗಾರರಾದ ನಮಗೆ ಉಪಕಾರವಾಗುತ್ತದೆ. ಅಲ್ಲದೆ ಇನ್ನೂ ಬಹಳ ಉಪಯೋಗಗಳಿವೆ. ಇತ್ತೀಚೆಗೆ ರಾಕೆಟ್ಟಿನಲ್ಲಿ ಮನುಷ್ಯರನ್ನೂ ಕಳುಹಿಸುತ್ತಿದ್ದಾರೆ."

"ಇದೇನು ವಿಚಿತ್ರ. ಅದು ಹಾಗಾದರೆ ವಿಮಾನವೆ ?" ಎಂದು ನಡುವೆಯೇ ಕೇಳಿದ ಕುಬೇರಶೆಟ್ಟಿ.

"ನೀವು ವಿಮಾನ ಹಾರುವುದನ್ನು ನೋಡಿದ್ದೀರಿ. ಅದು ಹಾರಲು ಗಾಳಿ ಇರಬೇಕು. ಆದುದರಿಂದ ನಮ್ಮಿಂದ ಸುಮಾರು ಒಂದೆರಡು ಮೈಲಿಗಳ ಎತ್ತರದಲ್ಲಿಯೇ ಹಾರುತ್ತಿದೆ. ಗಾಳಿಯು ಮೇಲೆ ಹೋದಂತೆ ಕಡಿಮೆ. ನೂರು ಮೈಲಿಗಳ ಮೇಲಂತೂ ಬಹಳ ಕಡಿಮೆ. ವಿಮಾನ ಅಷ್ಟು ಎತ್ತರಕ್ಕೆ ಹೋಗುವ ಹಾಗೆಯೇ ಇಲ್ಲ. ಅಲ್ಲಿಗೇ ಏಕೆ ಹತ್ತಾರು ಮೈಲಿ ಮೇಲೆ ಹೋದರೇ ಸಾಕು. ಬಿಸಿಗೆ ಕರಗಿ ಹೋಗುತ್ತದೆ. ಹೀಗಿರುವಾಗ ರಾಕೆಟ್ಟನ್ನು ಎಂತಹ ವಸ್ತುವಿನಿಂದ ಮಾಡಿರಬೇಕು ಯೋಚಿಸಿ. ಅದರಲ್ಲಿ ಇತ್ತೀಚೆಗೆ ಮನುಷ್ಯರನ್ನು ಕಳಿಸುತ್ತಿದ್ದಾರೆ ಎಂದೆನಲ್ಲವೆ ? ಅವರಿಗೆ ವಿಶೇಷವಾದ ಉಡುಪು ತೊಡಿಸಿರುತ್ತಾರೆ. ಅವರು

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಕೆಟ್ಟಿನಲ್ಲಿ ಸುತ್ತುವಾಗ ಊಟಮಾಡಲು ಆಹಾರವನ್ನೂ ಕಳಿಸಿರುತ್ತಾರೆ. ಇಲ್ಲಿನ ಹಾಗೆಯೇ ಅಲ್ಲಿಯೂ ಜೀರ್ಣವಾಗುತ್ತದೆಯೇ ಎಂದು ಪರೀಕ್ಷಿಸುತ್ತಾರೆ. ಸುತ್ತುತ್ತಿರುವಾಗ ಎದೆಯ ಬಡಿತ, ಉಸಿರಾಟದ ವೇಗ, ರಕ್ತ ಸಂಚಾರದ ವೇಗ ಇವನ್ನೂ ಯಂತ್ರಗಳಿಂದಲೇ ತಿಳಿಯುತ್ತಾರೆ. ತೊಡಿಸಿದ ಉಡುಪಿನಲ್ಲಿಯೇ ಇವುಗಳನ್ನು ತಿಳಿಸುವ ಯಂತ್ರಗಳನ್ನು ಹೊಂದಿಸಿರುತ್ತಾರೆ."

"ಅಂದರೆ ಎಂತಹ ವಿಚಿತ್ರ. ನಾವು ಡಾಕ್ಟರ್ ಎದುರು ನಿಂತು ಪರೀಕ್ಷೆ ಮಾಡಿಸಿಕೊಳ್ಳುತ್ತೇವೆ. ಈ ಭೂಪರು ಅಲ್ಲಿದ್ದುಕೊಂಡೇ ಯಂತ್ರಗಳ ಮೂಲಕ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ" ಎಂದು ಆಶ್ಚರ್ಯ ಸೂಚಿಸಿದ ನಾಗರೆಡ್ಡಿ.

"ಭೂಮಿಯಂತೆ ಚಂದ್ರ, ಮಂಗಳ, ಬುಧ ಮುಂತಾದ ಅನೇಕ ಗ್ರಹಗಳಿವೆ. ಅಲ್ಲಿಗೂ ಮನುಷ್ಯರು ಒಂದು ದಿನ ಪ್ರಯಾಣ ಮಾಡಲು ಸಾಧ್ಯವೆ ? ಅಲ್ಲಿಗೆ ಹೋಗಿ ಇಳಿಯಲು ಸಾಧ್ಯವೆ? ಅಲ್ಲಿಯೂ ನಮ್ಮಂತಹವರು ಇರಬಹುದೆ ? ಇದನ್ನು ಕಣ್ಣಾರೆ ನೋಡಲು ಆಸೆ ಆಗುವುದಿಲ್ಲವೆ ? ಆದುದರಿಂದಲೇ ಪರೀಕ್ಷೆಗಾಗಿ ಇಂತಹ ರಾಕೆಟ್ಟುಗಳನ್ನು ಹಾರಿಸುವುದು. ಒಂದೇ ಸಲ ಅಲ್ಲಿಗೆ ಹೋಗಲು ಆಗುವುದಿಲ್ಲ. ಬೇರೆ ಬೇರೆ ಎತ್ತರಗಳಲ್ಲಿ ಪರೀಕ್ಷಿಸಬೇಕು. ಮೊದಲು ಯಂತ್ರಗಳನ್ನು ಕಳಿಸಬೇಕು.

Sri Vidyabharathi Book Centre, Sringeri

CC-0. In Public Domain. Digitized by eGangotri

ಅವು ತಿಳಿಸುವ ವಿಷಯಗಳಿಂದ ಲೆಕ್ಕಾಚಾರ ಮಾಡಬೇಕು. ಆಗ ನಾವು ಹೋಗಲು ಏನು ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಯುತ್ತದೆ. ಹೀಗೆ ಬರಿಯ ರಾಕೆಟ್ಟು, ಮುಂದಿನ ಸಲ ಅದರಲ್ಲಿ ನಾಯಿ, ಇನ್ನೊಂದು ಬಾರಿ ಕೋತಿ, ಇನ್ನೊಂದು ಸಲ ಮನುಷ್ಯ ಹೀಗೆ ಒಂದೊಂದೇ ಪ್ರಯತ್ನ ನಡೆದಿದೆ."

"ಹಾಗಾದರೆ ನಮ್ಮ ಮನುಷ್ಯರಲ್ಲಿ ಮೊದಲು ಆಕಾಶದಲ್ಲಿ ಅಷ್ಟು ಎತ್ತರಕ್ಕೆ ಹಾರಿದವರು ಯಾರು ಸ್ವಾಮಿ ?" ಎಂದ ಬೈರಪ್ಪ.

"ರಷ್ಯಾ ದೇಶ ಎಂದು ಕೇಳಿರಬೇಕು. ಅಲ್ಲಿನವರು ದಿನಾಂಕ ೪-೧೦-೫೭ ರಂದು ಒಸ್ಕಾಕ್ ಎಂಬ ಹೆಸರಿನ ರಾಕೆಟ್ಟು ಹಾರಿಸಿದರು. ಅದರಲ್ಲಿ ಯೂರಿ ಗಗಾರಿನ್ ಎಂಬುವರನ್ನು ಕಳಿಸಿದ್ದರು. ಆ ರಾಕೆಟ್ಟು ಸುಮಾರು ೨೦೦ ಮೈಲಿ ಎತ್ತರಕ್ಕೆ ಹೋಗಿತ್ತು. ಆತ ಸುತ್ತ ಕಪ್ಪು ಆಕಾಶವನ್ನೂ ಕೆಳಗೆ ಭೂಮಿ ಗುಂಡಾಗಿರುವುದನ್ನೂ ಕಂಡ. ಈ ವಿಷಯಗಳನ್ನೂ ಮತ್ತು ಇತರ ಅನೇಕ ವಿಷಯಗಳನ್ನೂ ಅಲ್ಲಿಂದಲೇ ಯಂತ್ರಗಳ ಮೂಲಕ ತಿಳಿಸಿದ. ಈಗತಾನೇ ಬೆಂಗಳೂರಿನಲ್ಲಿ ಹೇಳಿದ ಸುದ್ದಿಯನ್ನು ಇಲ್ಲಿ ನಮ್ಮ ತಿಮ್ಮನಹಳ್ಳಿಯಲ್ಲಿ ರೇಡಿಯೋ ಯಂತ್ರದಲ್ಲಿ ಕೇಳಿದಿರಿ. ಹಾಗೆಯೇ ಗಗಾರಿನ್ ಅಲ್ಲಿಂದ ಮಾತಾಡಿದ್ದು ಯಂತ್ರಗಳ ಮೂಲಕ ಭೂಮಿಯವರಿಗೂ ಕೇಳಿಸಿತು. ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯ ತಿಳಿದು ಪ್ರಪಂಚದಲ್ಲಿ ಎಲ್ಲರಿಗೂ ಸಂತೋಷ ವಾಯಿತು. ತಾವೇ ಆಕಾಶಯಾನ ಮಾಡಿದಂತೆ ಜನಕ್ಕೆ ಅನ್ನಿಸಿತು. ದೂರ ದೂರದ ನಕ್ಷತ್ರಗಳಿಗೂ ಮನುಷ್ಯರು ಒಂದಲ್ಲ ಒಂದು ದಿನ ಹೋಗಬಹುದು ಎಂದು ತಿಳಿಯಿತು."

"ಅಬ್ಬಾ ಏನು ವಿಚಿತ್ರ" ಎಂದರು ಎಲ್ಲರೂ.

"ಇಷ್ಟೇ ಅಲ್ಲ. ಇನ್ನೂ ಅನೇಕ ಪ್ರಯತ್ನಗಳು ನಡೆದಿವೆ. ಗಗಾರಿನ್‌ರಂತೆಯೇ ಇನ್ನೂ ಅನೇಕರು ಇನ್ನೂ ಎತ್ತರಕ್ಕೆ ಹೋಗಿದ್ದರು. ಅವರು ಅನೇಕ ಚಿತ್ರಗಳನ್ನು ತೆಗೆದಿದ್ದಾರೆ. ಭೂಮಿಯ ಸುತ್ತ ಚಂದ್ರನಂತೆ ತಿರುಗಿದ್ದಾರೆ. ಅಮೆರಿಕಾ ದೇಶದ ಷಿರಾ ಎಂಬುವವರು ಮರ್ಕ್ಯುರಿ ಎಂಬ ರಾಕೆಟ್ಟಿನಲ್ಲಿ ಕೇವಲ ೯ ಗಂಟೆಗಳಲ್ಲಿ ಭೂಮಿಯನ್ನು ೬ ಸುತ್ತು ಹಾಕಿ ಹಿಂತಿರುಗಿದರು."

"ಅಬ್ಬಬ್ಬಾ, ಎಂತಹ ಸಾಹಸ" ಎಂದರು ಸಕಲರೂ.

"ಈಗತಾನೆ ರೇಡಿಯೋ ಕೇಳಿದಿರಿ. ಚಂದ್ರ ನಮ್ಮಿಂದ ೨ ಲಕ್ಷ ೨೦ ಸಾವಿರ ಮೈಲಿಗಳಿಗೂ ಹೆಚ್ಚು ದೂರದಲ್ಲಿದ್ದಾನೆ. ರೇಡಿಯೋದಲ್ಲಿ ಹೇಳಿದ ಆ ರಾಕೆಟ್ಟು ಅಷ್ಟುದೂರ ಹೊರಟು ಚಂದ್ರನಲ್ಲಿ ಇಳಿದಿದೆ. ಅದು ಅಲ್ಲಿನ ಮಣ್ಣು, ಹವೆ, ಕಾವು, ಶೀತ ಮುಂತಾದ ವಿಷಯಗಳನ್ನು ತಿಳಿಸುತ್ತದೆ. ಚಂದ್ರಗ್ರಹದ ಚಿತ್ರವನ್ನೂ ತೆಗೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಯುತ್ತದೆ. ಮುಂದೆ ಒಂದು ದಿನ ಮನುಷ್ಯ ಅಲ್ಲಿಗೂ ಹೋಗಿ ಇಳಿಯುತ್ತಾನೆ. ಮಾನವನ ಸಾಹಸ ಹೇಗಿದೆ ನೋಡಿದಿರಾ !" ಎಂದು ಮುಗಿಸಿದ,

---

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು . . .

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಬೆಲೆ ರೂ. 2-50

Sri Vidyabharathi Book Centre, Sringeri